**<u>ಪ್ರಥಮ ದರ್ಜೆ ನ್ಯಾಯಿಕಧಿಕಾರಿಗಳ ನ್ಯಾಯಾಲಯ, ಗೌರಿಬಿದನೂರು</u>**

**<u>ಸಿಸಿ ಸಂಖ್ಯೆ: 549/2021</u>**

| | |
|---|---|
| ಫ್ರಾಸಾ | 01 |
| ಚಾಸಾ | 01 |

ಸಾಕ್ಷಿಯನ್ನು ಕರೆಯಿಸಿ ಸತ್ಯ ಭೋದನೆ ಮಾಡಿ ಪ್ರಮಾಣೀಕರಿಸಿದ ದಿನಾಂಕ **15-11-2022**

| | | |
|---|---|---|
| ಸಾಕ್ಷಿಯ ಹೆಸರು | : | ಬೇಬಿ |
| ಗಂಡನ ಹೆಸರು | : | ಶಂಕರರೆಡ್ಡಿ |
| ವಯಸ್ಸು | : | 26 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ನಾಗೇನಹಳ್ಳಿ |

**<u>ಮುಖ್ಯ ವಿಚಾರಣೆ : ಎಪಿಪಿರವರಿಂದಃ</u>**

ಆರೋಪಿತರು ಗೈರುಹಾಜರಿದ್ದು, ಆರೋಪಿತರ ಪರ ವಕೀಲರು ಆರೋಪಿತರ ಗುರುತು ಪತ್ತೆಗಾಗಿ ತಕರಾರು ಇಲ್ಲವೆಂದು ನುಡಿದಿರುತ್ತಾರೆ. ಆದುದರಿಂದ, ನ್ಯಾಯಾಲಯವು ಸಾಕ್ಷಿ ವಿಚಾರಣೆಗೆ ಅನುಮತಿ ನೀಡಿರುತ್ತದೆ.

1 ನೇ ಆರೋಪಿ ನನ್ನ ಗಂಡ. 2 ನೇ ಆರೋಪಿ ನನ್ನ ಅತ್ತೆ ಹಾಗೂ 3 ನೇ ಆರೋಪಿ ನನ್ನ ಮಾವ. ನಾಗೇನಹಳ್ಳಿ ಗ್ರಾಮದ ಚಾಸಾ-2 ಜಗನ್ನಾಥ ಹಾಗೂ ಚಾಸಾ-3 ಸುಜಾತ ರವರ 2 ನೇ ಮಗಳಾದ ನನ್ನನ್ನು ಚಿಕ್ಕಕುರುಗೋಡು ಗ್ರಾಮದ 2 ಮತ್ತು 3 ನೇ ಆರೋಪಿತರ ಮಗ 1 ನೇ ಆರೋಪಿಗೆ ದಿನಾಂಕ 13.06.2013

ರಂದು ಧರ್ಮಸ್ಥಳದಲ್ಲಿ ಗುರು–ಹಿರಿಯರ ಸಮಕ್ಷಮ ವಿವಾಹ ಮಾಡಿದ್ದು, ವಿವಾಹ ಬಂಧನದಿಂದ ನಮಗೆ ನಿಹಾರಿಕ ಎಂಬ 9 ವರ್ಷದ ಮಗಳಿದ್ದಾಳೆ.

ಮದುವೆಯ ಸಂದರ್ಭದಲ್ಲಿ ನನ್ನ ಪೋಷಕರು 1 ನೇ ಆರೋಪಿಗೆ ಐದು ಲಕ್ಷ ನಗದು ಹಾಗೂ 8 ತೊಲ ತೂಕದ ಚಿನ್ನದ ನೆಕ್ಲೆಸ್ ನ್ನು ನನಗೆ ಹಾಗೂ 4 ತೊಲ ಚಿನ್ನದ ಸರವನ್ನು ನನ್ನ ಗಂಡನಿಗೆ ನೀಡಿದ್ದರು.

ಮದುವೆಯ ನಂತರ ನಾನು ಹಾಗೂ ನನ್ನ ಗಂಡ ನನ್ನ ತವರು ಮನೆಯಲ್ಲೇ ಒಂದು ವರ್ಷಗಳ ಕಾಲ ವಾಸವಾಗಿದ್ದೆವು. ನನ್ನ ತವರು ಮನೆಯಲ್ಲಿ ನಾನು ಮತ್ತು ನನ್ನ ಗಂಡ ಅನ್ಯೋನ್ಯವಾಗಿದ್ದೆವು. ಒಂದು ವರ್ಷ ಕಳೆದ ನಂತರ ದೊಡ್ಡಬಳ್ಳಾಪುರದಲ್ಲಿ ನಾನು ಮತ್ತು ನನ್ನ ಗಂಡ ಮೂರು ವರ್ಷಗಳ ಕಾಲ ವಾಸವಾಗಿದ್ದೆವು. ನನ್ನ ಗಂಡ ದೊಡ್ಡಬಳ್ಳಾಪುರದಲ್ಲಿ ಗಾರ್ಮೆಂಟ್ಸ್ ನಲ್ಲಿ ಕೆಲಸಕ್ಕೆ ಹೋಗುತ್ತಿದ್ದು, ಅಲ್ಲಿಯೂ ಸಹ ಅನ್ಯೋನ್ಯವಾಗಿದ್ದೆವು. ನಂತರದ ದಿನಗಳಲ್ಲಿ ನನ್ನ ಗಂಡ ಕೆಲಸ ಕಳೆದುಕೊಂಡಿದ್ದು, ಮಧ್ಯಪಾನಕ್ಕೆ ದಾಸನಾಗಿದ್ದು, ನನಗೆ ದೈಹಿಕವಾಗಿ ಹಲ್ಲೆ ಮಾಡುತ್ತಿದ್ದರು ಮತ್ತು ಅವಾಚ್ಯ ಶಬ್ದಗಳಿಂದ ಬೈದು ಮನೆಯಿಂದ ಹೊರದಬ್ಬುತ್ತಿದ್ದರು. ನಂತರ ನನ್ನ ತಂದೆ 2018 ರಂದು ದೊಡ್ಡಬಳ್ಳಾಪುರದಿಂದ ಬೆಂಗಳೂರಿನ ಅರಕೆರೆ ಮನೆಗೆ ನನ್ನನ್ನು ಕರೆದುಕೊಂಡು ಹೋದರು. ನಂತರ ನನ್ನ ಗಂಡನಿಗೆ ಕರೆ ಮಾಡಿ ಬೆಂಗಳೂರಿಗೆ ಕರೆಯಿಸಿಕೊಂಡೆವು. ಅಲ್ಲಿಯೂ ಸಹ ಒಂದು ವರ್ಷಗಳ ಕಾಲ ನನ್ನ ಗಂಡ ನನ್ನ ಜೊತೆ ಅನ್ಯೋನ್ಯವಾಗಿದ್ದರು. ನಂತರ ನನ್ನ ಗಂಡ ಚಿಕ್ಕಕುರುಗೋಡು ಗ್ರಾಮಕ್ಕೆ

ಬಂದರು. ನಾನು, ನನ್ನ ತಂದೆ ತಾಯಿ ಮತ್ತು ನನ್ನ ಅಕ್ಕ ಚಾಸಾ–4 ರವರು ಚಿಕ್ಕಕುರುಗೋಡು ಗ್ರಾಮಕ್ಕೆ ಹೋಗಿ ನನ್ನನ್ನು ಕರೆದುಕೊಂಡು ಹೋಗಲು ಆರೋಪಿಗೆ ಹೇಳಲಾಗಿ ಆರೋಪಿಯು ಅಲ್ಲಿಯೂ ಸಹ ಗಲಾಟೆ ಮಾಡಿದ್ದರು. ನನ್ನ ತಂದೆ ಅಂಗಡಿ ಹಾಕಿಕೊಡಲು ಆರೋಪಿಗೆ ತಿಳಿಸಿದ್ದರು ಹಾಗೂ ಅಂಗಡಿ ತೆರೆಯಲು ವ್ಯವಸ್ಥೆ ಮಾಡಿದ್ದರು ನನ್ನ ಗಂಡ ಅದಕ್ಕೆ ಒಪ್ಪಲಿಲ್ಲ. ನಂತರ ನಾನು ಮತ್ತು ನನ್ನ ತಂದೆ ತಾಯಿ ನಾಗೇನಹಳ್ಳಿ ಗ್ರಾಮಕ್ಕೆ ಬಂದು ನೆಲೆಸಿದೆವು. ಊರಿನಲ್ಲಿ ಗ್ರಾಮದ ಮುಖಂಡರ ಸಮಕ್ಷಮ ಹಾಗೂ ಜಿಲ್ಲಾ ಪಂಚಾಯಿತಿ ಸದಸ್ಯರಾದ ಆದಿನಾರಾಯಣ ಸಮಕ್ಷಮ ಆರೋಪಿಗೆ ಬುದ್ಧಿವಾದ ಹೇಳಿಸಲಾಗಿ, ಆರೋಪಿಯು ಪಂಚಾಯಿತಿದಾರರ ಮಾತಿಗೆ ಒಪ್ಪಿ ನನ್ನನ್ನು ಚಿಕ್ಕಕುರುಗೋಡು ಗ್ರಾಮಕ್ಕೆ ಕರೆದುಕೊಂಡು ಹೋದರು. ಅಲ್ಲಿ 3 ತಿಂಗಳ ಕಾಲ ಚೆನ್ನಾಗಿದ್ದೆವು, ನಂತರ ದಿನದ ದಿನಗಳಲ್ಲಿ ಹಣ ತರುವಂತೆ ನನಗೆ ಪೀಡಿಸುತ್ತಿದ್ದರು.

ದಿನಾಂಕ 13.10.2019 ರಂದು ಬೆಳಗ್ಗೆ 10.00 ಗಂಟೆಗೆ ಹಣ ತರುವಂತೆ ಗಲಾಟೆ ಮಾಡಿ ನನ್ನ ಗಂಡ ನನ್ನ ಕೆನ್ನೆಗೆ ಹೊಡೆದರು, 2 ನೇ ಆರೋಪಿ ನನ್ನ ಅತ್ತೆ ಪ್ಲಾಸ್ಟಿಕ್ ಬಕೆಟ್ ನಿಂದ ತಲೆಗೆ ಹೊಡೆದರು. ಆರೋಪಿತರು ಮೆಲಾಥಿನ್ ಪೌಂಡರ್ ನ್ನು ಮಜ್ಜಿಗೆಯಲ್ಲಿ ಬೆರೆಸಿ ಕುಡಿಸಿದರು. ನಂತರ ನಾನು ಕಿರುಚಾಡಿದಾಗ ನನ್ನ ಗಂಡ ನನ್ನನ್ನು ಗೌರಿಬಿದನೂರಿನ ಮಾನಸ ಆಸ್ಪತ್ರೆಗೆ ಚಿಕಿತ್ಸೆಗೆಂದು ದಾಖಲಿಸಿದ್ದರು. ಆಸ್ಪತ್ರೆಯಲ್ಲಿ ಒಂದು ದಿನ ಇದ್ದೆ. ಸದರಿ ವಿಚಾರವನ್ನು ನನ್ನ ಗಂಡ ನನ್ನ ತಂದೆ ತಾಯಿಗೆ

ತಿಳಿಸಿದರು. ಆಸ್ಪತ್ರೆಯ ವೈದ್ಯರು ನನ್ನನ್ನು ಬದುಕಿಸಲು ಆಗುವುದಿಲ್ಲ ಎಂದು ನನ್ನ ಪೋಷಕರಿಗೆ ತಿಳಿಸಿದರು. ನಂತರ ಬೆಂಗಳೂರಿನ ದೇವನಹಳ್ಳಿ ಮಾನಸ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆ. ಅಲ್ಲಿ ಸುಮಾರು ಒಂದೂವರೆ ಲಕ್ಷ ವೈದ್ಯಕೀಯ ಖರ್ಚು ಆಗಿತ್ತು. ಬೆಂಗಳೂರಿಗೆ ಆರೋಪಿತರು ನನ್ನನ್ನು ನೋಡಲು ಬಂದಿರಲಿಲ್ಲ. ಸಾಕ್ಷಿ ಮುಂದುವರೆದು 15 ದಿನಗಳ ಕಾಲ ಸದರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದೆ ಎಂದು ನುಡಿಯುತ್ತಾರೆ. ಆಸ್ಪತ್ರೆಯಿಂದ ಬಿಡುಗಡೆಯಾಗಿ ನಾನು ನಾಗೇನಹಳ್ಳಿ ಗ್ರಾಮಕ್ಕೆ ಬಂದು ನೆಲೆಸಿದೆ. ನಂತರ ನಾವು 1 ಮತ್ತು 3 ನೇ ಆರೋಪಿತರನ್ನು ಕರೆ ಮಾಡಿ ಬರಲು ತಿಳಿಸಿದೆವು. ನಾರಾಯಣರೆಡ್ಡಿ ಹಾಗೂ ಇತರೆ ದೊಡ್ಡವರು ಸೇರಿ ಆರೋಪಿತರಿಗೆ ನನ್ನನ್ನು ಕರೆದುಕೊಂಡು ಹೋಗಲು ತಿಳಿಸಿದರು. ನಂತರ ಆರೋಪಿಯು ನನ್ನ ಮನೆಗೆ ಬಂದು ಗಲಾಟೆ ಮಾಡಿ ಹೋದರು. ನಂತರ ನಾನು ಈಗ ನನಗೆ ತೋರಿಸುತ್ತಿರುವ ದೂರಿನಂತೆ ಪೊಲೀಸ್ ಠಾಣೆಗೆ ಆರೋಪಿತರ ವಿರುದ್ಧ ದೂರು ಸಲ್ಲಿಸಿದೆ. ಸದರಿ ದೂರಿನ ಪ್ರತಿಯನ್ನು **ನಿಪಿ–1** ಎಂದು, ನಿಪಿ 1 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ1(ಎ)** ಎಂದು ಗುರುತಿಸಲಾಯಿತು. ಸಾಕ್ಷಿಯು ಮುಂದುವರೆದು ಮೂರು ವರ್ಷವಾದರು ನನ್ನ ಗಂಡ ನನ್ನ ಮಗುವನ್ನು ನೋಡಲು ಬಂದಿರುವುದಿಲ್ಲ ಎಂದು ನುಡಿಯುತ್ತಾರೆ.

ದೂರು ನೀಡಿದ ನಂತರ ನನ್ನನ್ನು ಮತ್ತು ನನ್ನ ತಂದೆ ತಾಯಿಯನ್ನು ಪೊಲೀಸರು ಚಿಕ್ಕಕುರುಗೋಡು ಗ್ರಾಮಕ್ಕೆ ಕರೆದುಕೊಂಡು ಹೋದರು. ಯಾವ

ದಿನಾಂಕ ಕರೆದುಕೊಂಡು ಹೋದರು ನೆನಪಿಲ್ಲ. ಸಾಕ್ಷಿ ಮುಂದುವರೆದು ಸಂಜೆ 04.00 ರಿಂದ 05.30 ರವರೆಗೆ ಆರೋಪಿತರನ್ನು ಮತ್ತು ನಮ್ಮನ್ನು ವಿಚಾರಣೆ ಮಾಡಿದರು. ಸಾಕ್ಷಿಗೆ ಈ ಹಂತದಲ್ಲಿ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದರು. ಸದರಿ ಸ್ಥಳ ಪಂಚನಾಮೆ ಪ್ರತಿಯನ್ನು **ನಿಪಿ-2** ಎಂದು, ನಿಪಿ 2 ರಲ್ಲಿರುವ ಸಾಕ್ಷಿಯ ಸಹಿಯನ್ನು **ನಿಪಿ 2(ಎ)** ಎಂದು ಗುರುತಿಸಲಾಯಿತು. ಸಾಕ್ಷಿ ಮುಂದುವರೆದು ನಾನು 3 ಬಾರಿ ಪೊಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದು ನುಡಿಯುತ್ತಾರೆ. ಈ ಹಂತದಲ್ಲಿ ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಲಾಗಿ , ಸಾಕ್ಷಿಯು ಸದರಿ ಭಾವಚಿತ್ರಗಳು ನಾನು ಪ್ರೆಗ್ನೆನ್ಸಿ ಇದ್ದಾಗ ತೆಗೆದ ಛಾಯಾಚಿತ್ರಗಳು ಎಂದು ನುಡಿದಿರುತ್ತಾರೆ. ಸದರಿ ಛಾಯಾಚಿತ್ರಗಳನ್ನು **ನಿಪಿ 3 ಮತ್ತು ನಿಪಿ 4** ಎಂದು ಗುರುತಿಸಲಾಯಿತು.

**ಪಾಟೀಸವಾಲು: ಆರೋಪಿತರ ಪರ ವಕೀಲರ ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)**

**ಓ ಹೇ ಕೇ ಸ ಇದೆ**

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗೌರಿಬಿದನೂರು